(ಇಂದು ದಿನಾಂಕಃ 12-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲು ಶ್ರೀ ಎಸ ಎನ ಬಿ ವಕೀಲರಿಂದ ಪ್ರತಿವಾದಿಯ ಪರಃ**

1. ಹುಸೇನಪ್ಪರವರಿಗೆ ಸಮಮ್ಮ ಎಂಬ ಮಗಳು ಇದ್ದಾಳೆ ಎಂದರೆ ಸರಿ. ನಾನು 2003-2004 ರಲ್ಲಿ 01 ಎಕರೆ ಜಮೀನನ್ನು ಕಾರ್ತಿಕರವರಿಂದ ಖರೀದಿ ಮಾಡಿರುತ್ತೇನೆ. ನಾನು ಆ ಸಮಯದಲ್ಲಿ 8-9 ವರ್ಷದವನಾಗಿದ್ದೆ. ಆ ಸಮಯದಲ್ಲಿ ನಮ್ಮ ಮನೆಯ ವ್ಯವಹಾರವನ್ನು ನಮ್ಮ ತಂದೆ-ತಾಯಿ ಮಾಡುತ್ತಿದ್ದರು ಎಂದರೆ ಸರಿ. 2003-2004 ರಲ್ಲಿ 01 ಎಕರೆ ಜಮೀನನ್ನು ಕಾರ್ತಿಕರವರಿಂದ ಖರೀದಿ ಮಾಡಲು ನಮ್ಮ ತಂದೆ-ತಾಯಿ ಅವರಿವರಿಂದ

ಮತ್ತು ನಮ್ಮ ಮತ್ಯಾರವರಿಂದ ಹಣ ತೆಗೆದುಕೊಂಡಿದ್ದರು. ನನ್ನ ತಾಯಿಗೆ ಆರಾಮಇಲ್ಲ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನನ್ನ ತಾಯಿ ವಿದ್ಯಾಭ್ಯಾಸ ಮಾಡಿಲ್ಲ. ನನ್ನ ತಾಯಿಯನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದರೆ ಸತ್ಯ ಗೊತ್ತಾಗುತ್ತದೆ ಎಂದು ಅವರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ನನ್ನ ತಾಯಿ ಸಲ್ಲಿಸಿರುತ್ತಾರೆ. ಈ ದಾವೆ ಸಲ್ಲಿಸಲು ಏನು ವ್ಯಾಜ್ಯ ಕಾರಣ ಎಂದರೆ ಸಾಕ್ಷಿ ನನ್ನ ತಾಯಿಗೆ ಏನು ಗೊತ್ತಿಲ್ಲ ನಾವೇ ಹೇಳಿ ಬರೆಸಿರುತ್ತೇನೆ ಎಂದು ಹೇಳುತ್ತಾರೆ. ನನ್ನ ತಾಯಿ ಖರೀದಿ ಪತ್ರ ಬರೆದುಕೊಟ್ಟು ಸ್ವಾಧೀನ ಬರೆದುಕೊಟ್ಟು ಮ್ಯುಟೇಷನ ಮಾಡಿಕೊಟ್ಟ ಬಗ್ಗೆ ಗೊತ್ತಿದ್ದರು ಸಹ ಅವರಿಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಖರೀದಿ ಪತ್ರದ ಬಗ್ಗೆ ನನ್ನ ತಾಯಿಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಯಾವ ದಿನಾಂಕದಂದು ಉಂಟಾಯಿತು ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ 2021 ರಲ್ಲಿ ದಾವೆ ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ದಾವೆ ಸಲ್ಲಿಸಲು ಇನ್ನೊಂದು ಕಾರಣ ಯಾವಾಗ ಉಂಟಾಯಿತು ಎಂದು ಬರೆದಿರುತ್ತೇನೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ನಾನು ಬೇರೆ ಜಮೀನಿನಿಂದ ಸರಕಾರದಿಂದ ಪ್ರತಿ ವರ್ಷ ಸೌಲಭ್ಯ ಪಡೆಯುತ್ತಿದ್ದೇನೆ ಎಂದರೆ ಸರಿ. ನಾನು ದಾವಾ ಆಸ್ತಿಯ ಪಹಣಿಯನ್ನು 2021 ರ ನೋಡಿರುತ್ತೇನೆ. ನಾನು ದಾವಾ ಆಸ್ತಿಯ ಪಹಣಿಯನ್ನು 2021 ರಲ್ಲಿ ನೋಡಿದ ನಂತರ ಪಹಣಿಯನ್ನು ಸಂಬಂಧಪಟ್ಟ ಕಛೇರಿಯಲ್ಲಿ ಪ್ರಶ್ನಿಸಿರುತ್ತೇನೆ. ನಾವು ಜಮೀನನ್ನು ಮಾರಾಟ ಮಾಡಿ ಬಂದ ಹಣದಿಂದ ಚಿಂಚೋಳಿಯಲ್ಲಿ ಇನ್ನೊಂದು ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮಾರಾಟ ಮಾಡಿದ ಜಮೀನಿನ ಖರೀದಿ ಪತ್ರಕ್ಕೆ ನನ್ನ ಅಜ್ಜ, ಮತ್ತು ನನ್ನ ತಂದೆ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಂದ್ರಪ್ಪ ತಂದೆ ರಾಮಪ್ಪ ನಮ್ಮ ಊರಿನವರು ಎಂದರೆ ಸರಿ. ಅವರು ಬದುಕಿದ್ದಾರೆ. ರಚನಪ್ಪ ತಂದೆ ಸಂಗಪ್ಪ, ಅಂಜಣ್ಣ ತಂದೆ ರಾಮಣ್ಣ, ರಾಮಪ್ಪ ತಂದೆ ಲಾಲಪ್ಪ,

ಪೆಂಟಪ್ಪರವರು ಈ ವ್ಯವಹಾರದ ಬಗ್ಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ಅವರು ಖರೀದಿ ಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಮಾಡಿದಾಗಿನಿಂದ ಇಲ್ಲಿಯವರೆಗೆ ವ್ಯವಸಾಯದ ಕಾಲಂನಲ್ಲಿ ಪ್ರತಿವಾದಿಯರ ಹೆಸರು ಇದೆ ಎಂದರೆ ಸಾಕ್ಷಿ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ಹೇಳುತ್ತಾರೆ. ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ತೋರಿಸಲು ದಾಖಲೆಯನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ.

2. ಸುಮಾರು 20 ವರ್ಷದಿಂದ ಪ್ರತಿವಾದಿಯರು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದು ಸರಕಾರದ ಸೌಲಭ್ಯವನ್ನು ಅವರೆ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.